**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**- 233/2003 **PW**-1

**ದಿಃ 23.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 10 ರಿಂದ 12 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

ದಿಃ08.11.1994 ರಂದು ಇನಾಂದಾರ ವಕೀಲರು ತಮಗೆ ನೋಟೀಸನ್ನು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನನಗೆ ತಲುಪಿರುವದಿಲ್ಲ ಎನ್ನುತ್ತಾರೆ. ದಿಃ10.03.1996 ರಂದು ಜೆ ಕೆ ಬೆನಕಟ್ಟಿ ರವರಿಗೆ ನೋಟೀಸನ್ನು ಕೊಟ್ಟಿರುತ್ತೀರಿ ಎಂದರೆ ಸರಿ. ಸಾಕ್ಷಿಗೆ ಅದರ ಪ್ರತಿಯನ್ನು ತೋರಿಸಲಾಗಿ ಅದನ್ನು ಅವರು ಒಪ್ಪಿದ ಕಾರಣ ಆದರೆ ಅದು ನಕಲು ಪ್ರತಿಯಾಗಿರುವ ಕಾರಣ ಗುರುತಿಸುವಿಕೆಯ ಉದ್ದೇಶದಿಂದ ನಿಐ 1 ಎಂದು, ಸಾಕ್ಷಿ ಗುರುತಿಸಿದ ಸಹಿಯನ್ನು ನಿಐ 1 ಎ ಎಂದು ಗುರುತಿಸಲಾಯಿತು. ಇದು ನಾಟ್ ಅಡ್ಮಿಸಿಬಲ್ ಇನ್ ಎವಿಡೆನ್ಸ ಎಂದು ಅದರ ಮೂಲ ಪ್ರತಿಯನ್ನು ಹಾಜರುಪಡಿಸಿ ನಿಶಾನೆಗೆ ಒಳಪಡಿಸಬಹುದೆಂದು ಸ್ಪಷ್ಟೀಕರಿಸಲಾಗಿದೆ. ನಿಐ 1 ರ ಪ್ರಕಾರ ನಾನು ಖರೀದಿ ಪತ್ರವನ್ನು ಮಾಡಿಕೊಡಿ ಎಂದು ಕೇಳಿ ನೋಟೀಸನ್ನು ಕೊಟ್ಟಿದ್ದೆ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿಯು ಇರುತ್ತದೆ. ನನಗೆ ಈ ಪ್ರಕರಣದಲ್ಲಿ ಯಾವೆಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಮತ್ತು ಪ್ರತಿವಾದಿಯರು ಯಾವೆಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆಂಬ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸಾಕ್ಷಿಗೆ ದಿನಾಂಕಃ07.05.1997 ರಂದು ಜೆ ಕೆ ಬೆನಕಟ್ಟಿ ರವರಿಗೆ ನೀಡಿದ ನೋಟೀಸಿನ ಜೆರಾಕ್ಸ ಪ್ರತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿ ಇರುತ್ತದೆಂದರೆ ಸಾಕ್ಷಿಯು ದಾಖಲೆ ನೋಡಿ ಒಪ್ಪಿದ್ದು ಅದನ್ನು ಗುರುತಿಸುವಿಕೆಯ ಉದ್ದೇಶದಿಂದ ನಿಐ 2 ಎಂದು, ಸಾಕ್ಷಿ ಗುರುತಿಸಿದ ಸಹಿಯನ್ನು ನಿಐ 2 ಎ ಎಂದು ಗುರುತಿಸಲಾಯಿತು. ಇದು ನಾಟ್ ಅಡ್ಮಿಸಿಬಲ್ ಇನ್ ಎವಿಡೆನ್ಸ ಎಂದು ಅದರ ಮೂಲ ಪ್ರತಿಯನ್ನು ಹಾಜರುಪಡಿಸಿ ನಿಶಾನೆಗೆ ಒಳಪಡಿಸಬಹುದೆಂದು ಸ್ಪಷ್ಟೀಕರಿಸಲಾಗಿದೆ. ಸದರಿ ನಿಐ 2 ರಲ್ಲಿ ಖರೀದಿ ಮಾಡಿಕೊಡದಿದ್ದರೆ ಅನಿವಾರ್ಯವಾಗಿ ನ್ಯಾಯಾಲಯಕ್ಕೆ ಹೋಗಬೇಕೆಂದು ಉಲ್ಲೇಖಿಸಲಾಗಿದೆ ಎಂದರೆ ಸರಿ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿ ಅದರಲ್ಲಿರುವ ಸಹಿ ಯಾರದು ಎಂದು ಕೇಳಲಾಗಿ ತನ್ನದೇ ಎಂದು ನುಡಿಯುತ್ತಾರೆ. ಸದರಿ ದಾಖಲೆಯು ಅಂಚೆ ಸ್ವೀಕೃತಿಯ ನಕಲು ಪ್ರತಿಯಾಗಿದ್ದು

ಅಂಚೆ ಸ್ವೀಕೃತಿ ಮೇಲಿರುವ ನಂಬರಃ16597 ಜೆರಾಕ್ಸ ಪ್ರತಿಯಾಗಿರುವ ಕಾರಣ ಗುರುತಿಸುವಿಕೆಯ ಉದ್ದೇಶದಿಂದ ನಿಐ 3 ಎಂದು, ಸಾಕ್ಷಿ ಗುರುತಿಸಿದ ಸಹಿಯನ್ನು ನಿಐ 3 ಎ ಎಂದು ಗುರುತಿಸಲಾಯಿತು. ಇದು ನಾಟ್ ಅಡ್ಮಿಸಿಬಲ್ ಇನ್ ಎವಿಡೆನ್ಸ ಎಂದು ಅದರ ಮೂಲ ಪ್ರತಿಯನ್ನು ಹಾಜರುಪಡಿಸಿ ನಿಶಾನೆಗೆ ಒಳಪಡಿಸಬಹುದೆಂದು ಸ್ಪಷ್ಟೀಕರಿಸಲಾಗಿದೆ. ತಾವು ನಿಐ 2 ಕ್ಕೆ ನೋಟಿಸನಲ್ಲಿರುವ ವ್ಯಕ್ತಿಯು ತಮಗೊಂದು ಮರುಉತ್ತರವನ್ನು ಕೊಟ್ಟಿರುತ್ತಾರೆಂದರೆ ಸರಿ. ಅದರಲ್ಲಿ ನಾವು ಆಧರಿಸಿರುವ ಕರಾರು ಪತ್ರವನ್ನೇ ನಿರಾಕರಿಸಿದ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. ಸದರಿ ಬೆನಕಟ್ಟಿ ರವರು ತಮಗೆ ಯಾವದೇ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿರದ ಕಾರಣ ತಾವು ಕೇಳಿದಂತೆ ಖರೀದಿ ಪತ್ರವನ್ನು ಬರೆದುಕೊಡಲು ಆಗುವದಿಲ್ಲ ಎಂದು ಹೇಳಿ ಉತ್ತರವನ್ನು ಕೊಟ್ಟಿರುತ್ತಾರೆಂದರೆ ಸರಿ. ಸದರಿ ಮರು ಉತ್ತರದ ನೋಟೀಸು ಸಹ ನಕಲು ಪ್ರತಿಯಾಗಿದ್ದು ಅದನ್ನು ಗುರುತಿಸುವಿಕೆಯ ಉದ್ದೇಶದಿಂದ ನಿಐ 4 ಎಂದು ಗುರುತಿಸಲಾಯಿತು. ಇದು ನಾಟ್ ಅಡ್ಮಿಸಿಬಲ್ ಇನ್ ಎವಿಡೆನ್ಸ ಎಂದು ಅದರ ಮೂಲ ಪ್ರತಿಯನ್ನು ಹಾಜರುಪಡಿಸಿ ನಿಶಾನೆಗೆ ಒಳಪಡಿಸಬಹುದೆಂದು ಸ್ಪಷ್ಟೀಕರಿಸಲಾಗಿದೆ. 1994 ರಿಂದ 2001 ರವರೆಗೆ ನಿಮ್ಮ ಮತ್ತು ಬೆನಕಟ್ಟಿ ರವರ ನಡುವೆ ನಾವು ಆಧರಿಸಿರುವ ಸಂಚಗಾರ ಪತ್ರ ಆಗಿದೆ ಎಂದು ಹಾಗೂ ಬೆನಕಟ್ಟಿ ರವರು ಯಾವದೇ ಸಂಚಗಾರ ಪತ್ರ ಬರೆದುಕೊಟ್ಟಿಲ್ಲ ಎಂದು ಹೇಳಿ ಸಾಕಷ್ಟು ಪತ್ರ ವ್ಯವಹಾರಗಳು ಆಗಿರುತ್ತವೆಂದರೆ ಸರಿ.

2. ದಿನಾಂಕಃ10.01.2001 ರಲ್ಲಿ ತಾವು ಬಿ ಡಿ ಹೆಗಡೆ ವಕೀಲರ ಮುಖಾಂತರ ಬೆನಕಟ್ಟಿ ರವರಿಗೆ ನೋಟೀಸನ್ನು ಕೊಟ್ಟಿರುತ್ತೀರಿ ಎಂದರೆ ಸರಿ. ದಿಃ19.01.2001 ರಂದು ಎಸ್ ಎಂ ಲಕ್ಷ್ಮೇಶ್ವರ ವಕೀಲರು ಬಿ ಡಿ ಹೆಗಡೆ ವಕೀಲರಿಗೆ ಮರು ಉತ್ತರವನ್ನು ಕೊಟ್ಟಿರುತ್ತಾರೆಂದರೆ ಸರಿ. 1994 ರಿಂದ 2001 ರವರೆಗೆ ನಡೆದ ಪತ್ರ ವ್ಯವಹಾರಗಳನ್ನು ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. 1994 ರಿಂದ 2001 ರವರೆಗಿನ ಪತ್ರದ ವ್ಯವಹಾರಗಳನ್ನು ಹಾಜರುಪಡಿಸಿದರೆ ನಿಜ ಸಂಗತಿ ಗೊತ್ತಾಗುತ್ತದೆಂದು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನ್ನ ಸಂಚಗಾರ ಪತ್ರವು ನ್ಯಾಯಾಲಯದ ತೀರ್ಮಾನಕ್ಕೆ ಒಳಪಡುತ್ತಿದ್ದ ಕಾರಣ ಹಾಜರುಪಡಿಸಿಲ್ಲ ಎನ್ನುತ್ತಾರೆ. 1994 ರಿಂದ 2003 ರ ಮದ್ಯದಲ್ಲಿ ಸಂಚಗಾರ ಪತ್ರದ ವಿಚಾರವಾಗಿ ನಾನು ಯಾವದೇ ದಾವೆಯನ್ನು ಹಾಕಿರಲಿಲ್ಲ. 2001 ರಲ್ಲಿ ಗೌ. ಉಚ್ಚನ್ಯಾಯಾಲಯದಲ್ಲಿ ಪ್ರಕರಣ ತೀರ್ಮಾನ ಆದ ಬಗ್ಗೆ ಗೊತ್ತಿರಲಿಲ್ಲ. ನಾನು ಬಿ ಡಿ ಹೆಗಡೆ ವಕೀಲರ ಮುಖಾಂತರ ನೋಟೀಸನ್ನು ಕೊಟ್ಟಾಗ ಗೌ. ಉಚ್ಚನ್ಯಾಯಾಲಯದಲ್ಲಿ ಇದ್ದ ಪ್ರಕರಣದ ಬಗ್ಗೆ ತಿಳಿದುಕೊಳ್ಳದೇ ನೋಟೀಸು ಕೊಟ್ಟಿರುತ್ತೇನೆ. ನಾನು ಗೌ.ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವು ನಿಖಾಲಿಯಾಗಿದ್ದನ್ನು ಖಚಿತಪಡಿಸಿಕೊಂಡು ಈ ದಾವೆಯನ್ನು ಮಾಡಿರುತ್ತೇನೆ.

ಯಾವ ದಿನಾಂಕದಂದು ಗೌ.ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ತೀರ್ಮಾನವಾಯಿತು ಎಂದರೆ ಸಾಕ್ಷಿಯು ನಿಖರವಾದ ದಿನಾಂಕ ಗೊತ್ತಿಲ್ಲ ಎಂದು ಹಾಗೂ 1999-2000 ರ ಮದ್ಯೆದಲ್ಲಿ ಆಗಿರಬಹುದು ಎನ್ನುತ್ತಾರೆ. ಗೌ ಉಚ್ಚನ್ಯಾಯಾಲಯದಲ್ಲಿ ಯಾರೆಲ್ಲಾ ಮದ್ಯೆ ಪ್ರಕರಣ ನಡೆದಿತ್ತು ಎಂಬ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಗೌ.ಉಚ್ಚ ನ್ಯಾಯಾಲಯದಲ್ಲಿ ತೀರ್ಮಾನವಾದ ಬಗ್ಗೆ ನನ್ನ ಅಸಲರ್ಜಿಯಲ್ಲಿ ಉಲ್ಲೇಖಿಸಿರುತ್ತೇನೆ. ಮಾಲೀಕರು ಒಟ್ಟುಮೊಕ್ತಿಯಾರ ಪತ್ರವನ್ನು ಬರೆದುಕೊಟ್ಟ ಬಗ್ಗೆ ತಿಳಿಸಿದ್ದು ಆ ದಾಖಲೆಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಕೊಟ್ಟಿರುತ್ತೇನೆ ಎನ್ನುತ್ತಾರೆ.

ಈ ಸಂದರ್ಬದಲ್ಲಿ ನ್ಯಾಯಾಲಯದ ಕಾಲಾವದಿಯು ಮುಗಿದ ಕಾರಣ ಮುಂದುವರೆದ ಪಾಟೀ ಸವಾಲಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.